www.ecourtsindia.com

# 2 ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ ಚನ್ನರಾಯಪಟ್ಟಣ.

## ಸಿ.ಸಿ ನಂ. : 972/2021

ಪಿರ್ಯಾದುದಾರ :- ಗೀತಾ ಎಂ. ಬಿನ್ ದಿನೇಶ,
ಸುಮಾರು 38 ವರ್ಷ ವಯಸ್ಸು,
ವಾಸಃ ಅರೆಸೋಮನಹಳ್ಳಿ ಗ್ರಾಮ,
ನುಗ್ಗೇಹಳ್ಳಿ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು,
ಹಾಸನ ಜಿಲ್ಲೆ.

**ವಿರುದ್ಧ**

ಆರೋಪಿ :- ಪ್ರದೀಪ ಹೆಚ್.ಎಂ. ಬಿನ್ ಮಂಜೇಗೌಡ,
ಸುಮಾರು 32 ವರ್ಷ ವಯಸ್ಸು
ವಾಸಃ ಅರೆಸೋಮನಹಳ್ಳಿ ಗ್ರಾಮ,
ನುಗ್ಗೇಹಳ್ಳಿ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು,
ಹಾಸನ ಜಿಲ್ಲೆ.

ಹಾಲಿ ವಿಳಾಸಃ ಬಿ.ಎಂ.ಟಿ.ಸಿ. ಡ್ರೈವರ್,
ಬ್ಯಾಡ್ಜ್ ನಂ.22209, ಪೀಣ್ಯ ಡಿಪೋ ನಂ.22,
ಪೀಣ್ಯ 2 ನೇ ಹಂತ, ಬೆಂಗಳೂರು.

-:: <u>ಅಪರಾಧದ ಸಂಕ್ಷಿಪ್ತ ವಿವರಣೆ</u> ::-

ಆರೋಪಿಯಾದ ನೀನು ಪಿರ್ಯಾದುದಾರರಿಂದ ರೂ.2,60,000/- ಗಳನ್ನು 2020 ನೇ ಇಸವಿ ನವೆಂಬರ್ ತಿಂಗಳ ಮೊದಲ ವಾರದಲ್ಲಿ ಭೇಟಿಯಾಗಿ ಸಾಲವಾಗಿ ಕೇಳಲಾಗಿ, ಆರೋಪಿಯಾದ ನಿನಗೆ ರೂ.2,60,000/- ಗಳ ಸಾಲವನ್ನು ತೀರಿಸುವ ಸಲುವಾಗಿ ಆರೋಪಿಯಾದ ನೀನು ಖಾತೆ ಹೊಂದಿರುವ ಎಸ್.ವಿ.ಸಿ. ಕೋ-ಆಪಾರೇಟಿವ್ ಬ್ಯಾಂಕ್ ಲಿಮಿಟೆಡ್ ಚಾಮರಾಜಪೇಟೆ ಬ್ರಾಂಚ್ ನಂ.1 ಸೆಂಟ್ರಲ್ ಬ್ಯಾಂಕ್ ರಸ್ತೆ, ಬೆಂಗಳೂರು-560018 ಶಾಖೆಗೆ ದಿಃ 11.02.2021 ರಂದು ಚೆಕ್ ನಂ.090766 ನೀಡಿದ್ದು, ಸದರಿ ಚೆಕ್ ಅನ್ನು ನಗದೀಕರಣಕ್ಕಾಗಿ ದಿನಾಂಕ 11.02.2021 ರಂದು ಕೆನರಾ ಬ್ಯಾಂಕ್, ಚನ್ನರಾಯಪಟ್ಟಣ ಶಾಖೆಗೆ ಹಾಜರುಪಡಿಸಿದಾಗ, ಸದರಿ ಬ್ಯಾಂಕ್‌ನವರು ಆರೋಪಿಯ ಖಾತೆ “ಸಾಕಷ್ಟು ಹಣವಿಲ್ಲ" ಎಂಬ ಹಿಂಬರಹದೊಂದಿಗೆ ಚೆಕ್ಕನ್ನು ದಿನಾಂಕ 12.02.2021 ರಂದು ವಾಪಾಸ್ ನೀಡಿರುತ್ತಾರೆ. ಈ ಬಗ್ಗೆ ಪಿರ್ಯಾದಿಯು ದಿಃ 22.02.2021 ರಂದು ವಕೀಲರ ಮೂಲಕ ನಿಮಗೆ ನೊಂದಾಯಿತ ಅಂಚೆ ಮೂಲಕ ನೀಡಿದ್ದು, ಆರೋಪಿಗೆ 1 ನೇ ವಿಳಾಸದಲ್ಲಿ ದಿಃ 01.03.2021 ರಂದು ಅನ್ ಕ್ಲೈಮಡ್ ಎಂಬ ಹಿಂಬರಹದೊಂದಿಗೆ ಮತ್ತು 2 ನೇ ವಿಳಾಸದಲ್ಲಿ ದಿಃ 08.03.2021 ರಂದು ಕ್ಲೈಮಡ್ ಎಂಬ

This is a True Copy of the Court Records Online. Authenticated @ districts.ecourtsindia.com/cnr/KAHS610017962021/truecopy/order-1.pdf

ಹಿಂಬರಹದೊಂದಿಗೆ ವಾಪಸ್ಸು ಬಂದಿರುತ್ತದೆ. ಆದರೆ ಆರೋಪಿಯಾದ ನೀನು ಪಿರ್ಯಾದಿಗೆ ಹಣವನ್ನಾಗಲೀ, ನೋಟೀಸ್ ಗೆ ಉತ್ತರನ್ನಾಗಲೀ ನೀಡಿರುವುದಿಲ್ಲ. ಆದ್ದರಿಂದ, ಆರೋಪಿಯಾದ ನೀವು ನೆಗೋಷಿಯಬಲ್ ಇನ್ಸ್ಟುಮೆಂಟ್ ಆಕ್ಟ್ ಕಲಂ 138 ರ ರೀತ್ಯಾ ದಂಡನೀಯ ಅಪರಾಧ ಎಸಗಿರುತ್ತೀಯಾ ಎಂದು ಆಪಾದಿಸಲಾಗಿದೆ.

ಪ್ರಶ್ನೆ1 : ಈಗ ನಿಮಗೆ ಓದಿ ಹೇಳಿದ ಆರೋಪವನ್ನು ಅರ್ಥ ಮಾಡಿಕೊಂಡಿದ್ದೀರಾ?
ಉತ್ತರ :

ಪ್ರಶ್ನೆ2 : ನಿಮ್ಮ ಮೇಲೆ ಹೋರಿಸಲಾದ ಆರೋಪವನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ವಿಚಾರಣೆಯಾಗಬೇಕೆ?
ಉತ್ತರ :

ಮೇಲಿನ ಆರೋಪವನ್ನು ಆರೋಪಿತನಿಗೆ ಅರ್ಥವಾಗುವ ರೀತಿಯಲ್ಲಿ ಓದಿ ಹೇಳಿ, ವಿವರಿಸಿ ನಂತರ ಆತನು ನೀಡಲಾದ ಉತ್ತರವನ್ನು ನಾನೇ ಸ್ವತಃ ನನ್ನ ಹಸ್ತಾಕ್ಷರದಲ್ಲಿ ಬರೆದುಕೊಂಡು ನಿಜವಾದ ಮತ್ತು ಸರಿಯಾದ ಹೇಳಿಕೆ ಎಂದು ಈ ಮೂಲಕ ಧೃಡೀಕರಿಸುತ್ತೇನೆ.

2 ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ.

This is a True Copy of the Court Records Online. Authenticated @ districts.ecourtsindia.com/cnr/KAHS610017962021/truecopy/order-1.pdf